# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/42/14-15

ದಿನಾಂಕ : 05-08-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1)ಶ್ರೀ ಹಂಪಯ್ಯ ತಂದೆ ಲೇಟ್ ಕುಮಾರಯ್ಯ ಗುಡುದೂರು ಗ್ರಾಮ ಬಳ್ಳಾರಿ ತಾಲೂಕು<br><br>ಶ್ರೀ ಡಿ ಮಲ್ಲಯ್ಯ ವಕೀಲರು ಬಳ್ಳಾರಿ | 1) ತಹಶೀಲ್ದಾರರು ಬಳ್ಳಾರಿ<br>2)ಕಂದಾಯ ನಿರೀಕ್ಷಕರು ಕೋಳೂರು<br>3)ಗ್ರಾಮ ಲೆಕ್ಕಾಧಿಕಾರಿಗಳು ಗುಡುದೂರು<br>4)ಜಂಗಮರ ರುದ್ರಯ್ಯ ತಂದೆ ಅಡಿವೆಪ್ಪ ಇವರ ವಾರಸುದಾರರು<br>4(ಅ)ಶ್ರೀಮತಿ ಗಂಗಮ್ಮ ಗಂಡ ಲೇಟ್ ಜಂಗಮರ ರುದ್ರಯ್ಯ<br>4(ಬ)ಶ್ರೀ ಶಂಕ್ರಯ್ಯ ತಂದೆ ಲೇಟ್ ಜಂಗಮರ ರುದ್ರಯ್ಯ<br>4(ಕ) ಶ್ರೀ ಈಶ್ವರಯ್ಯ ತಂದೆ ಲೇಟ್ ಜಂಗಮರ ರುದ್ರಯ್ಯ<br>ಗುಡುದೂರುಗ್ರಾಮ ಬಳ್ಳಾರಿ ತಾಲೂಕು |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಗುಡುದೂರು | 121 | 6.62 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಕೋಳೂರು ಇವರ ಎಂ ಆರ್ ನಂ 31/05-06 ದಿನಾಂಕ 28-11-2005 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 05-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಮತ್ತು ಪ್ರತಿವಾದಿಗಳ ಹಾಗೂ ವಾದಿಪರ ವಕೀಲರು ದಿನಾಂಕ: 05-8-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಗುಡುದೂರು ಗ್ರಾಮದ ಸ.ನಂ 121 ವಿಸ್ತೀರ್ಣ: 6.62 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಕೋಳೂರು ಇವರ ಎಂ ಆರ್ ನಂ 31/05-06 ದಿನಾಂಕ 28/11/2005 ರ ಆದೇಶವನ್ನು ರದ್ದು ಪಡಿಸಿ ನೋಂದಾಯಿತ ಕ್ರಯ ಪತ್ರ ಸಂಖ್ಯೆ 2426/75-76 ದಿನಾಂಕ 05-11-1975 ರನ್ವಯ ಮೇಲ್ಮನವಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಿಕೊಡುವಂತೆ ಕೋರಿದರು,

ಮುಂದುವರೆದು ಪ್ರಕರಣದಲ್ಲಿನ ಲಭ್ಯದಾಖಲೆಗಳನ್ನು ಪರಿಶೀಲಿಸಲಾಗಿ ಮೇಲ್ಮನವಿದಾರನು ಸದರಿ ವಿವಾದಾಸ್ಪದ ಜಮೀನಿನ ಸ.ನಂ 121 ರಲ್ಲಿ 6.62 ಎಕರೆ ಜಮೀನಿನ ವಿಸ್ತೀರ್ಣದಲ್ಲಿ 5.00 ಎಕರೆ ಜಮೀನನ್ನು ಖರಿದಿಸಿದ್ದು , ನೋಂದಾಯಿತ ಕ್ರಯಪತ್ರ ಆಧರಿಸಿ ಆಕಾರ್ ಬಂದ ದಾಖಲೆಗೆ ತಾಳೆಯಿಟ್ಟು ಅಗತ್ಯ ತಿದ್ದುಪಡಿ ಮಾಡಿಕೊಡಲು ತಹಶೀಲ್ದಾರರು ಬಳ್ಳಾರಿ ಇವರಿಗೆ ಆದೇಶಿಸುವುದು ಸೂಕ್ತವಿರುವುದರಿಂದ ಈಕೆಳಗಿನಂತೆ ಆದೇಶಿಸಿದೆ.

## :: ಆದೇಶ ::

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ಗುಡುದೂರು ಗ್ರಾಮದ ಸ.ನಂ 121 ವಿಸ್ತೀರ್ಣ: 6.62 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯಲ್ಲಿ ಪರಿಶೀಲಿಸಿರುವ ಅಂಶಗಳನ್ನಾಧರಿಸಿ ಸೂಕ್ತ ತಿದ್ದುಪಡಿ ಪ್ರಸ್ತಾವನೆಯನ್ನು ಈ ಆದೇಶ ತಲುಪಿದ ಏಳು ದಿನಗಳಲ್ಲಿ ಈ ಪ್ರಾಧಿಕಾರಕ್ಕೆ ಸಲ್ಲಿಸಿ ನಿಯಾಮಾನುಸಾರ ಅಗತ್ಯ ಕ್ರಮ ಜರಿಗಿಸಲು ತಹಶೀಲ್ದಾರರು ಬಳ್ಳಾರಿ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ:05-08-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

ಸಹಾಯಕ ಆಯುಕ್ತರು
ಬಳ್ಳಾರಿ.

ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ತಹಶೀಲ್ದಾರರು ಬಳ್ಳಾರಿ ಇವರಿಗೆ ಮುಂದಿನ ಕ್ರಮಕ್ಕಾಗಿ